# ಪೊರ್ಕಿ ಫಿಲಾಸಫಿ



ಕುಂದಾಪುರ ಪರಿಸರದಲ್ಲಿ 'ಡ್ರಾಮಾ' ಕಂಪನಿ ಈಚೆಗೆ ಬೀಡು ಬಿಟ್ಟಿತ್ತು. ಅಲ್ಲಿನ ವಹಿವಾಟು ಮುಗಿಸಿಕೊಂಡು, ಕಂಪನಿಯನ್ನು ಪ್ಯಾಕಪ್ ಮಾಡಿಕೊಂಡು ಬೆಂಗಳೂರಿಗೆ ಬಂದಿದ್ದ ನಿರ್ದೇಶಕ ಯೋಗರಾಜ ಭಟ್ಟರಿಗೆ ದಣಿವಾಗಿತ್ತು. ದೇಹಕ್ಕಿರಲಿ, ಅವರ ಮಾತುಗಳಲ್ಲೇ ದಣಿವಿನ ಸುಳಿವು ಕಾಣಿಸುತ್ತಿತ್ತು.

'ಡ್ರಾಮಾ' ಯೋಗರಾಜ ಭಟ್ಟರು ನಿರ್ದೇಶಿಸುತ್ತಿರುವ ಚಿತ್ರದ ಹೆಸರು. ಮೈಸೂರು-ಮಂಡ್ಯ ಸೀಮೆಯಲ್ಲಿ ಒಂದಿಷ್ಟು ಶೂಟಿಂಗ್ ಮುಗಿಸಿಕೊಂಡು, ಕುಂದಾಪುರದ ಪರಿಸರವನ್ನೂ ಸೂರೆಗೊಂಡ ಚಿತ್ರತಂಡ ಇದೀಗ ಬೆಂಗಳೂರಿಗೆ ಮರಳಿದೆ. 'ಅರೆ, ಇಷ್ಟು ಬೇಗ ಶೂಟಿಂಗ್ ಮುಗಿದು ಹೋಯ್ತಾ?' ಎನ್ನುವ ಪ್ರಶ್ನೆಯೊಂದಿಗೆ ಮಾತು ಶುರುವಾಯಿತು.

'ಹಾಂ. ಒಂದು ಸಾಂಗ್ ಶೂಟಿಂಗ್ ಅಷ್ಟೇ ಬ್ಯಾಲೆನ್ಸ್ ಇದೆ. ಅದು ಮುಗಿದರೆ ಶೂಟಿಂಗ್ ಮುಗಿದಂತೆ. ಈವರೆಗೆ ಹೆಚ್ಚೂ ಕಡಿಮೆ ಅರವತ್ತು ದಿನ ಚಿತ್ರೀಕರಣ ನಡೆಸಿದ್ದೇವೆ' ಎಂದರು ಭಟ್ಟರು. ಅಂದಹಾಗೆ, 'ಡ್ರಾಮಾ' ಚಿತ್ರದಲ್ಲಿ ಮಳೆ ಭರ್ಜರಿಯಾಗಿ ಸುರಿದಿದೆಯಂತೆ. ಮುಂಗಾರಿನ ಸಹಜ ಮಳೆಯ ಜೊತೆಗೆ ಕೃತಕ ಮಳೆಯನ್ನೂ ಸುರಿಸಿಕೊಂಡು ಭಟ್ಟರು ಶೂಟಿಂಗ್ ನಡೆಸಿದ್ದಾರೆ. ಅವರ ಮಾತಲ್ಲೇ ಹೇಳೋದಾದರೆ– 'ಕುಂದಾಪುರದಲ್ಲಿ ಶೂಟಿಂಗ್ ಭಾರೀ ಮಜಾ ಇತ್ತು'. ಇರೋ ಬರೋ ಮಳೆಯನ್ನೆಲ್ಲ ಸಿನಿಮಾದಲ್ಲೇ ಖಾಲಿ ಮಾಡಿರಬೇಕು; ಆ ಕಾರಣಕ್ಕಾಗಿಯೇ ನಾಡಿನಲ್ಲಿ ಮಳೆ ಕಾಣೆಯಾಗಿರಬೇಕು ಎಂದು ಕೆಣಕಿದರೂ, ಆ ಬಗ್ಗೆ ಭಟ್ಟರ ಗಮನವೇ ಹರಿಯಲಿಲ್ಲ. ಅವರ ಧ್ಯಾನವೆಲ್ಲ 'ಡ್ರಾಮಾ'ದ ಹಾಡುಗಳಲ್ಲೇ ಮುಳುಗಿತ್ತು.

'ತಿದ್ದಿ ತೀಡೋದು, ಶ್ರುತಿ ಸರಿಪಡಿಸೋದು ಸೇರಿದಂತೆ ಸಣ್ಣಪುಟ್ಟ ಕೆಲಸಗಳು ಸಾಕಷ್ಟಿವೆ. ಆಗಸ್ಟ್ ಎರಡನೇ ವಾರದ ವೇಳೆಗೆ ಗೀತೆಗಳ ದನಿಮುದ್ರಿಕೆ ಪೇಟೆಯಲ್ಲಿರಬೇಕು' ಎಂದರು.

ಈಚೆಗೆ ಭಟ್ಟರು ಹಾಡು ಬರೆಯೋದರಲ್ಲಿ ನಂಬರ್ 1 ಎನ್ನಿಸಿ ಕೊಂಡಿದ್ದಾರಲ್ಲ; ಅದಕ್ಕೆ ತಕ್ಕಂತೆ 'ಡ್ರಾಮಾ'ದ ಗೀತೆಗಳ ಬಗ್ಗೆಯೂ ನಿರೀಕ್ಷೆಗಳು ಹೆಚ್ಚಿವೆ. 'ಈ ಚಿತ್ರದ ಗೀತೆಗಳ ರಚನೆಯಲ್ಲಿ ಸಂಪೂರ್ಣ 'ಯು ಟರ್ನ್' ತೆಗೆದುಕೊಂಡಿರುವೆ. ಗೇಯತೆ – ಲಯ ಅಂತಾರಲ್ಲ, ಅದರಲ್ಲೆಲ್ಲ ವಿಚಿತ್ರ ಎಕ್ಸ್‌ಪೆರಿಮೆಂಟ್ ಮಾಡಲಿಕ್ಕೆ ಪ್ರಯತ್ನಿಸಿರುವೆ. ಹಾಡುಗಳನ್ನು ಕೇಳುವಾಗ ನಗು ಬರುತ್ತೆ. ನಕ್ಕ ಮೇಲೆ ಸುಮ್ಮನೆ ಇರಲಿಕ್ಕೆ ಆಗೊಲ್ಲ. ಇವುಗಳನ್ನು ಒಂದು ರೀತಿಯಲ್ಲಿ ತತ್ತ್ವಪದ ಅನ್ನಬಹುದು. ಪೊರ್ಕಿ ಫಿಲಾಸಫಿ ಎಂದರೆ ಹೆಚ್ಚು ಸರಿ ಆದೀತೇನೋ...'

ಭಟ್ಟರ ಮಾತುಗಳೇ ಒಂದು ಸಿನಿಮಾ ಪದ್ಯದಂತಿತ್ತು.

ಹಾಡು ಆಮೇಲೆ ಕೇಳೋಣ ಬಿಡಿ. ಸದ್ಯಕ್ಕೆ ಸಿನಿಮಾದ ವಿಶೇಷದ ಬಗ್ಗೆ ಹೇಳಿ ಎಂದರೆ ಭಟ್ಟರದು ಮತ್ತದೇ ಅರೆಬರೆ ಮಾತು. 'ಸಿನಿಮಾ ಒಂಥರಾ ಮಜವಾಗಿರ್‍ತದೆ. ಅಪರೂಪಕ್ಕೆ ಕಥೆ ಬೇರೆ ಮಾಡಿಕೊಂಡು ಪ್ರಾಣ ಹೋಗ್ತಿದೆ' ಎಂದರು.

ಇಷ್ಟು ಮಾತನಾಡುವ ಹೊತ್ತಿಗೆ ಭಟ್ಟರಿಗೆ ಮತ್ತೆ ದಣಿವಾಗಿತ್ತು. ಅದು ಕುಂದಾಪುರ ಎಫೆಕ್ಟ್! ಅಂದಹಾಗೆ, 'ಡ್ರಾಮಾ' ತಂಡದಲ್ಲಿ ಯಶ್, ರಾಧಿಕಾ ಪಂಡಿತ್, ನೀನಾಸಂ ಸತೀಶ್, ಸಿಂಧು ಸೇರಿದಂತೆ ಒಂದಿಷ್ಟು ಪಡ್ಡೆ ಹೈಕಳಿದ್ದಾರೆ. ಈ ಜಾಣಜಾಣೆಯರ ಮೂಲಕ ಆರೋಗ್ಯ ಶಾಸ್ತ್ರದ ಪ್ರಬುದ್ಧ ಕಥೆಯನ್ನು ಭಟ್ಟರು ಹೇಳುತ್ತಿದ್ದಾರಂತೆ. ಅದು ಸಾಮಾಜಿಕ, ಆರ್ಥಿಕ ಹಾಗೂ ಲೈಂಗಿಕ ಆರೋಗ್ಯಕ್ಕೆ ಸಂಬಂಧಿಸಿದ ಕಥನ! ಅರವತ್ತರ ಜೋಕುಮಾರ ಅಂಬರೀಷಣ್ಣಯ್ಯ ಬೊಂಬೆ ಆಡಿಸುವಾತನ ಪಾತ್ರದಲ್ಲಿ ನಟಿಸಿರುವುದು 'ಡ್ರಾಮಾ'ದ ಇನ್ನೊಂದು ಹೈಲೈಟ್.

■ ರಘು

